ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಶಿವಮೂರ್ತಿಯವರು ಪ್ರಸ್ತಾಪಿಸಿರುವ ವಿಷಯವನ್ನು ಸರ್ಕಾರ ಗಮನಿಸಿದ್ದು, ಇದಕ್ಕೆ ಸಣ್ಣ ನೀರಾವರಿ ಸಚಿವರಿಂದ ನಾಳೆ ಉತ್ತರ ಕೊಡಿಸುತ್ತೇನೆ.

5) ವಿಷಯ : ಮಡಿಕೇರಿಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸುವುದು.

ಶ್ರೀ ಕೆ.ಜಿ.ಬೋಪಯ್ಯ (ಮಡಿಕೇರಿ) : ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ನಮ್ಮ ಜಿಲ್ಲೆಗೆ ವೈದ್ಯಕೀಯ ಕಾಲೇಜು ಮಂಜೂರು ಮಾಡಿತ್ತು. ವೈದ್ಯಕೀಯ ಕಾಲೇಜು ಸ್ಥಾಪಿಸಲು ಅಗತ್ಯವಿರುವ ಮೂಲ ಸೌಕರ್ಯಗಳೆಲ್ಲವೂ ನಮ್ಮ ಜಿಲ್ಲೆಯಲ್ಲಿದೆ. ಇದಕ್ಕಾಗಿ 10 ಎಕರೆಗಳಷ್ಟು ಜಾಗ ಗುರುತಿಸಲಾಗಿದ್ದು, ಈ ತಕ್ಷಣದಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಕಟ್ಟಡವನ್ನು ಖಾಲಿ ಮಾಡಿ ಇರಿಸಿಕೊಳ್ಳಲಾಗಿದೆ. ಆದರೂ, ಇನ್ನೂ ಪ್ರಾರಂಭಿಸಿರುವುದಿಲ್ಲ. ಈ ಕುರಿತು ಕೌನ್ಸೆಲಿಂಗ್‌ನಲ್ಲೂ ಸಹ ಕಾಣುತ್ತಿಲ್ಲ. ಆದುದರಿಂದ, ನಮ್ಮ ಜಿಲ್ಲೆಯಲ್ಲಿ ತಕ್ಷಣದಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭಿಸಿದಲ್ಲಿ, All India Medical Councilಗೆ ಏನೇನು ಕಳುಹಿಸಬೇಕೋ, ಅದೆಲ್ಲವನ್ನೂ ನಮ್ಮ ಜಿಲ್ಲೆಯಿಂದ ಕಳುಹಿಸಿಕೊಡಲಾಗಿದೆ.

ಶ್ರೀ ಅಪ್ಪಚು ರಂಜನ್ ಎಂ.ಪಿ. : ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಏನೇನು ಅಗತ್ಯತೆಗಳು ಬೇಕೋ, ಎಲ್ಲವನ್ನೂ ಜಿಲ್ಲೆಯಿಂದ ಒದಗಿಸಿಕೊಟ್ಟಿದ್ದೇವೆ. ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಈಗಾಗಲೇ ಕಟ್ಟಡವನ್ನು ಪರಿಶೀಲಿಸಲಾಗಿದೆ. ಆದುದರಿಂದ, ವೈದ್ಯಕೀಯ ಕಾಲೇಜು ಕಟ್ಟಡ ತೆರೆದರೆ ಒಳ್ಳೆಯದು.

ಶ್ರೀ ಟಿ.ಬಿ.ಜಯಚಂದ್ರ : ನಿಮ್ಮ ಜಿಲ್ಲೆಯಲ್ಲಿ ಆದಂತೆ ನಮ್ಮ ಜಿಲ್ಲೆಯಲ್ಲೂ ಅದೇ ಪರಿಸ್ಥಿತಿ ಇದೆ. ನಾನು ಈ ಕುರಿತು ಮಾನ್ಯ ಮಂತ್ರಿಗಳಿಂದ ನಿರ್ದಿಷ್ಟ ಉತ್ತರ ಕೊಡಿಸುತ್ತೇನೆ. ಈ ಕುರಿತು ನಿಮಗಿರುವಷ್ಟೇ ಆಸಕ್ತಿ ನನಗೂ ಇದೆ. ವೈದ್ಯಕೀಯ ಕಾಲೇಜು ಸ್ಥಾಪಿಸಲು ಸರ್ವಾನುಮತದಿಂದ ಎಲ್ಲರೂ ಒಪ್ಪಿಗೆ ನೀಡಿದ್ದೇವೆ. ನಾವೂ ಹೇಳಿದ್ದೇವೆ.

6) ವಿಷಯ : ಹೆರಿಗೆ ಆಸ್ಪತ್ರೆ ಕಟ್ಟಡ ನಿರ್ಮಿಸಿಕೊಡುವುದು ಮತ್ತು 15 ಹಾಸಿಗೆಗಳ ಆಸ್ಪತ್ರೆಯನ್ನು 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಶ್ರೀ ಆರ್.ಅಖಂಡ ಶ್ರೀನಿವಾಸ್ ಮೂರ್ತಿ [ಪುಲಿಕೇಶಿನಗರ] :– ಮಾನ್ಯ ಅಧ್ಯಕ್ಷರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪುಲಿಕೇಶಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ವಾರ್ಡ್ ನಂ.61, S.K.Garden ವಾರ್ಡ್‌ನಲ್ಲಿ ಸುಮಾರು 50 ವರ್ಷಗಳಿಂದ ಹಳೆಯ ಆಸ್ಪತ್ರೆಯೊಂದಿದೆ. ಅಲ್ಲಿಯ ಹೆರಿಗೆ ಆಸ್ಪತ್ರೆ ಕಟ್ಟಡ ಸಮೇತ ಕುಸಿದು ಬಿದ್ದು 10 ವರ್ಷಗಳು ಕಳೆದಿದೆ. ಈಗ ಹೊಸದಾಗಿ ಸದರಿ ಜಾಗದಲ್ಲಿ 50 ಹಾಸಿಗೆಗಳ ಹೆರಿಗೆ ಆಸ್ಪತ್ರೆ ಹಾಗೂ ಸಾರ್ವಜನಿಕರ ಆಸ್ಪತ್ರೆಯನ್ನು ನಿರ್ಮಾಣ ಮಾಡಿಕೊಡಲು ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ. ಅದೇ ರೀತಿಯಲ್ಲಿ, ಮುನೇಶ್ವರ ನಗರ ವಾರ್ಡ್‌ನಲ್ಲಿ 15 ಹಾಸಿಗೆಗಳ ಆಸ್ಪತ್ರೆ ಇದ್ದು, ಅದನ್ನು 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ತಮ್ಮಲ್ಲಿ ಕೋರುತ್ತೇನೆ.

ಶ್ರೀ ಯು.ಟಿ.ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ಇದು ಬೆಂಗಳೂರು ನಗರ ಪ್ರದೇಶದಲ್ಲಿ ಬರುವಂತಹ ಆಸ್ಪತ್ರೆಯಾಗಿದೆ. ಇದಕ್ಕಾಗಿ ಈಗಾಗಲೇ National Urban Health Mission ಯೋಜನೆ ಅಡಿಯಲ್ಲಿ ನಮ್ಮ ನಗರಪಾಲಿಕೆ ವ್ಯಾಪ್ತಿಯಲ್ಲಿ 50 ಸಾವಿರ ಜನಸಂಖ್ಯೆ ಯಾವುದು ಬರುತ್ತದೋ, ಅಂತಹ ಕಡೆಗಳಲ್ಲಿ ಹೆರಿಗೆ ಆಸ್ಪತ್ರೆಯೊಂದನ್ನು ಮಾಡಬೇಕೆನ್ನುವ ತೀರ್ಮಾನವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಅಂತಹ ಸಂದರ್ಭದಲ್ಲಿ ಅಲ್ಲಿಯ population ಮತ್ತು ಅಲ್ಲಿಯ ಜನ ಸಾಮಾನ್ಯರು ಯಾವ ರೀತಿಯಲ್ಲಿ ಇದ್ದಾರೆ ಎಂದು ನೋಡುತ್ತೇವೆ. ಜಾಸ್ತಿ ಕೊಳೆಗೇರಿ ಇರುವ ಪ್ರದೇಶವಾಗಿದೆಯೇ? ಎಂಬ ಮಾಹಿತಿಗಳನ್ನೆಲ್ಲಾ ಕ್ರೋಡಿಕರಿಸಿಕೊಂಡು ಬಹುಶಃ ...

ಶ್ರೀ ಅಖಂಡ ಶ್ರೀನಿವಾಸ್ ಮೂರ್ತಿ :– ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :– No,ಚರ್ಚೆ. ಈಗ ಯಾವುದೇ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಯು.ಟಿ.ಖಾದರ್ :– ಮಾನ್ಯ ಸದಸ್ಯರ ಕೋರಿಕೆ ಇರುವುದು ಬಹಳ ಸಂತೋಷದ ವಿಚಾರವಾಗಿದೆ. ಮಾನ್ಯ ಸದಸ್ಯರು ಇಂತಹ ಬೇಡಿಕೆ ಇಡಬಹುದು. ಆದರೆ ನಮ್ಮ system ನಲ್ಲಿ ಏನಿದೆ ಎಂಬುದನ್ನು ನೋಡಿಕೊಂಡು ಬಹುಶಃ ಅವರಿಗೆ ಉತ್ತರ ಕೊಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ. ಖಂಡಿತವಾಗಿಯೂ ಪುಲಿಕೇಶಿನಗರಕ್ಕೆ ಶೀಘ್ರದಲ್ಲಿಯೇ ಭೇಟಿ

ಕೊಟ್ಟು, ಆ ಪ್ರದೇಶದಲ್ಲಿ ಯಾವ ರೀತಿಯಾಗಿ ಜನಸಾಮಾನ್ಯರಿದ್ದಾರೆ, ಅಲ್ಲಿಯ health system ಹೇಗಿದೆ ಎಂಬ ಬಗ್ಗೆ ಆಲೋಚನೆ ಮಾಡಿಕೊಂಡು, ಕೇಂದ್ರ ಸರ್ಕಾರದಿಂದ ನಮಗೆ ಬರುವ ಬೇರೆ ಬೇರೆ ಯೋಜನೆಗಳ ಅಡಿಯಲ್ಲಿ ಅಲ್ಲಿ ಅತ್ಯುತ್ತಮವಾದ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು Maternity Hospital ಅನ್ನು ಖಂಡಿತವಾಗಿ ನಿರ್ಮಾಣ ಮಾಡಿಕೊಡುತ್ತೇವೆ.

7) **ವಿಷಯ : Indo-German multi skill development Centre ಅನ್ನು ಬೇರೆ ಕಡೆಗೆ ಸ್ಥಳಾಂತರಿಸದೆ ಮಂಗಳೂರಿನಲ್ಲೇ ಮುಂದುವರೆಸುವ ಬಗ್ಗೆ.**

ಶ್ರೀ ಜೆ.ಆರ್.ಲೋಬೋ (ಮಂಗಳೂರು ನಗರ ದಕ್ಷಿಣ) :– ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಸರ್ಕಾರಿ ITI ಸಂಸ್ಥೆಯಲ್ಲಿ Indo-German multi skill development Centre ಎಂಬುದೊಂದು ಇದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಸುಮಾರು 48 ಕೋಟಿ ರೂ.ಗಳ ವೆಚ್ಚದಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲು ಕಳೆದ ವರ್ಷ ಮಂಜೂರು ಮಾಡಲಾಗಿತ್ತು. ಈ ದಿಸೆಯಲ್ಲಿ ಈಗಾಗಲೇ ಕೆಲಸಗಳು ಪ್ರಾರಂಭವಾಗಿವೆ. ಈ ಕೇಂದ್ರವನ್ನು ನಡೆಸಲು ಬೇಕಾಗಿರುವಂತಹ ಕಟ್ಟಡಕ್ಕೆ ಸುಮಾರು 30 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿತಿ ಕೇಂದ್ರದಿಂದ interior ಕೂಡ ಆಗಿದೆ. ಕೇಂದ್ರ ಸ್ಥಾಪನೆ ಮಾಡಲು ಕ್ರಮ ಜರುಗಿಸಲಾಗಿದೆ. ಆದರೆ ಇತ್ತೀಚೆಗೆ ಈ ಕೇಂದ್ರವನ್ನು ಇಲ್ಲಿಂದ ಬಳ್ಳಾರಿ ಜಿಲ್ಲೆಗೆ ವರ್ಗಾಯಿಸಲಾಗುತ್ತದೆ ಎಂದು ತಿಳಿದು ಬಂದಿದೆ. ದಯಮಾಡಿ, ಈ ರೀತಿಯ ಪ್ರಸ್ತಾವನೆಯಿದ್ದರೆ, ಸರ್ಕಾರವು ಇದನ್ನು ನಿಲ್ಲಿಸಬೇಕಾಗಿದೆ. ಮಂಗಳೂರಿನ ಕೇಂದ್ರವನ್ನು ಮಂಗಳೂರಿನಲ್ಲೇ ಮುಂದುವರೆಸಬೇಕು, ಉಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು]:– ಮಾನ್ಯ ಅಧ್ಯಕ್ಷರೆ, ಮಾನ್ಯ ಜೆ.ಆರ್.ಲೋಬೋರವರು ಪ್ರಸ್ತಾಪಿಸಿರತಕ್ಕ ಪ್ರಶ್ನೆಯನ್ನು ಸರ್ಕಾರ ಗಮನಿಸಿದೆ. ಅವರ ಅಹವಾಲನ್ನು ಮಾನ್ಯ